# ನಗರಸಭಾ ಕಾರ್ಯಾಲಯ, ಮಂಡ್ಯ.

ಸಂಖ್ಯೆ:ನಸಮಂ/ಸಭೆ/20/2006-07. ದಿನಾಂಕ:19-8-2006.

**-: <u>ಸಾಮಾನ್ಯ ಅಧಿವೇಶನ</u> :-**

**ದಿನಾಂಕ:19-8-2006 ರಂದು ಶನಿವಾರ ಬೆಳಿಗ್ಗೆ 11-00 ಘಂಟೆಗೆ ಸರಿಯಾಗಿ ಮಂಡ್ಯ ನಗರಸಭಾ ಕಾರ್ಯಾಲಯದ ಶ್ರೀ ಧರಣಪ್ಪ ಸಭಾಂಗಣದಲ್ಲಿ ಮಾನ್ಯ ನಗರಸಭಾಧ್ಯಕರವರ ಅಧ್ಯಕ್ಷತೆಯಲ್ಲಿ ನಡೆಸಲಾದ ನಗರಸಭೆ ಸಾಮಾನ್ಯ ಅಧಿವೇಶನದ ನಡವಳಿಕೆಗಳು.**

**ಹಾಜರಿ:29+2 ಗೈರು ಹಾಜರಿ:5+2 ಖಾಲಿ:1 ಒಟ್ಟು:35+4**

**<u>ವಿಷಯ:1:</u>-** ಹಿಂದಿನ ಸಭೆ ನಡವಳಿಕೆಗಳನ್ನು ಓದಿ ರೆಕಾರ್ಡು ಮಾಡುವ ವಿಚಾರ.

**<u>ತೀರ್ಮಾನ:1:-</u>** ದಿನಾಂಕ:18-7-2006ರ ಸಾಮಾನ್ಯ ಸಭೆ ವಿಷಯ ಸಂಖ್ಯೆ:12ರ ತೀರ್ಮಾನದಲ್ಲಿ ಒಂದು ಲಕ್ಷ (1.00ಲಕ್ಷ) ರೂಪಾಯಿಗಳು ಎಂಬುದನ್ನು ಎರಡು ಲಕ್ಷ (2.00ಲಕ್ಷ) ರೂಪಾಯಿಗಳಿಗೆ ಮೆಟಲ್ ಹಲಾಯಿಡ್ ದೀಪಗಳನ್ನು ಖರೀದಿಸುವುದೆಂದು ತಿದ್ದುಪಡಿ ಮಾಡಿಕೊಳ್ಳಲಾಯಿತು. ಮತ್ತು ವಿಷಯ ಸಂಖ್ಯ:21(2)ರ ತೀರ್ಮಾನದಲ್ಲಿ ವಾರ್ಡ್ ನಂಬರ್ 12ರಲ್ಲಿ ಒಳಚರಂಡಿ ದುರಸ್ಥಿ ಎಂಬುದನ್ನು ವಾಟರ್ ಪೈಪನ್ನು ಅಳವಡಿಸಲು ಎಂಬುದಾಗಿ ತಿದ್ದುಪಡಿ ಮಾಡಿಕೊಳ್ಳಲಾಯಿತು.

ಅಧ್ಯಕ್ಷರ ಅಧಿಕೃತ ವಾಹನ ದುರಸ್ತಿಯಲ್ಲಿದ್ದ ಸಮಯದಲ್ಲಿ ಮಾನ್ಯ ಅಧ್ಯಕ್ಷರು ದಿನನಿತ್ಯದ ಕಛೇರಿ ಕಾರ್ಯಚಟುವಟಿಕೆಗಳಿಗೆ ಓಡಾಡಲು ವಾಹನ ಅವಶ್ಯಕತೆ ಇದ್ದುದ್ದರಿಂದ ಖಾಸಗಿಯಾಗಿ ಬಾಡಿಗೆಗೆ ಪಡೆದಿದ್ದ ವಾಹನ ವೆಚ್ಚ (ರೂ.20,000/-) ಇಪ್ಪತ್ತು ಸಾವಿರ ರೂ.ಗಳನ್ನು ಹಿಂದಿನ ಸಭೆಯಲ್ಲಿ ತೀರ್ಮಾನಿಸಿರುವುದನ್ನು ಸದಸ್ಯರುಗಳಾದ ಶ್ರೀ.ಹೆಚ್.ಕೆ.ರುದ್ರಪ್ಪರವರು, ಶ್ರೀ.ಎಂ.ಡಿ.ಜಯರಾಂರವರು, ಶ್ರೀಮತಿ.ಸುಜಾತಮಣಿರವರು, ಶ್ರೀಮತಿ.ಗೀತಾ ರಾಮಕೃಷ್ಣರವರು, ಶ್ರೀ.ಎಂ.ಸಿ.ರಾಘವೇಂದ್ರರವರು ವಿರೋದ ವ್ಯಕ್ತಪಡಿಸಿದರು. ವಿಷಯದ ಬಗ್ಗೆ ಮಾನ್ಯ ಸದಸ್ಯರುಗಳಾದ ಶ್ರೀ.ಬಿ.ಎಂ.ಬಾಷರವರು, ಶ್ರೀ.ಮಹದೇವು (ಕಿಟ್ಟಿ)ರವರು, ಶ್ರೀಮತಿ.ಈರಮ್ಮರವರು, ಶ್ರೀಮತಿ.ಲಕ್ಷ್ಮಮ್ಮರವರು ಈ ಹಿಂದೆ ತೀರ್ಮಾನಿಸಿರುವುದನ್ನು ಈಗಾಗಲೇ ಒಪ್ಪಲಾಗಿದೆ. ಪುನ: ಪ್ರಸ್ತಾಪ ಬೇಡವೆಂಬುದಾಗಿ ತಿಳಿಸಿದ್ದಕ್ಕೆ ಸದರಿಯವರುಗಳ ಅಭಿಪ್ರಾಯವನ್ನು ಅನುಮೋದಿಸಲಾಯಿತು ಹಾಗೂ ಶ್ರೀ.ಮಹದೇವು(ಕಿಟ್ಟಿ)ರವರು , ಶ್ರೀ.ಎಂ.ಡಿ.ಜಯರಾಂರವರು, ಶ್ರೀ.ಬಿ.ಎಂ.ಬಾಷರವರುಗಳು ಟೆಂಡರ್ ಡಾಕ್ಯುಮೆಂಟ್ ಬುಕ್‌ಗಳನ್ನು ನಿಯಮಾನುಸಾರ ಟೆಂಡರ್ ಕರೆಯದೇ ಕೊಟೇಷನ್ ಮುಖಾಂತರ ಖರೀದಿಸಿರುವುದಕ್ಕೆ ವಿರೋಧ ವ್ಯಕ್ತಪಡಿಸುತ್ತಾ ಚರ್ಚೆ ಮುಂದಿವರೆದು ನಿಯಮಾನುಸಾರ ಮಾನ್ಯ ಜಿಲ್ಲಾಧಿಕಾರಿಗಳವರ ಅನುಮತಿ ಪಡೆದು ಕ್ರಮ ಕೈಗೊಳ್ಳುವುದೆಂದು ತೀರ್ಮಾನಿಸಲಾಯಿತು.

ವಾರ್ಡ್ ನಂಬರ್ 1 ರಲ್ಲಿ ನಂದಾ ಟಾಕೀಸ್ ಬ್ರಿಡ್ಜ್‌ನಿಂದ ಜಬ್ಬಾರ್ ಸರ್ಕಲ್‌ವರೆಗೆ ಅವಶ್ಯಕತೆ ಇರುವಷ್ಟು ಸಂಖ್ಯೆ ಬೀದಿ ದೀಪಗಳನ್ನು ಪರಿಶೀಲಿಸಿ ಖರೀದಿಸುವುದೆಂದು ತಿದ್ದುಪಡಿ ಮಾಡಿಕೊಳ್ಳುವುದೆಂದು ತೀರ್ಮಾನಿಸಲಾಯಿತು.

ದಿನಾಂಕ:18-7-2006ರ ಸಾಮಾನ್ಯ ಸಭೆ ವಿಷಯ ಸಂಖ್ಯೆ:2 ರ ಕಲ್ಲಹಳ್ಳಿ ಗೋಡನ್ ನಿರ್ಮಾಣದ ಬಗ್ಗೆ ಸದಸ್ಯರಾದ ಶ್ರೀ.ಎಂ.ಡಿ.ಜಯರಾಂ ರವರು ವಿಷಯ ಪ್ರಸ್ತಾಪಿಸುತ್ತಾ ಕಾನೂನಿನ ಪ್ರಕಾರ ಕ್ರಮ ಕೈಗೊಳ್ಳಲು ಸಭೆಯಲ್ಲಿ ಅಭಿಪ್ರಾಯ ವ್ಯಕ್ತಪಡಿಸಿದರು.

–2–

ದಿನಾಂಕ:18–7–2006ರ ಸಾಮಾನ್ಯ ಸಭೆ ವಿಷಯ ಸಂಖ್ಯೆ:21(20)ರ ತೀರ್ಮಾನದಲ್ಲಿ ಒಪ್ಪಿಗೆ ಎಂಬುದಾಗಿ ತಿದ್ದುಪಡಿ ಮಾಡಿಕೊಳ್ಳಲು ತೀರ್ಮಾನಿಸಲಾಯಿತು. ಮತ್ತು ಕ್ರಮವಾಗಿ ದಿನಾಂಕ:7–6–2006ರ ಸಾಮಾನ್ಯ ಸಭೆ ವಿಷಯ ಸಂಖ್ಯೆ:5(ಬಿ) ರ ತೀರ್ಮಾನ ಮತ್ತು ದಿನಾಂಕ:18–7–2006ರ ಸಾಮಾನ್ಯ ಸಭೆ ವಿಷಯ ಸಂಖ್ಯೆ;21(18)ರ ತೀರ್ಮಾನದಂತೆ ಮಾನ್ಯ ಜಿಲ್ಲಾಧಿಕಾರಿಗಳ ಅನುಮೋದನೆ ಪಡೆದು ಟೆಂಡರ್ ಕರೆದು ಕಡಿಮೆ ದರದ ಟೆಂಡರನ್ನು ಅಂಗೀಕರಿಸಿ ಕಾಮಗಾರಿ ನಿರ್ವಹಿಸಲು ಮಾನ್ಯ ಅಧ್ಯಕ್ಷರಿಗೆ ಅಧಿಕಾರ ನೀಡುವುದೆಂದು ತೀರ್ಮಾನಿಸಲಾಯಿತು.

__ವಿಷಯ:2:__– ದಿನಾಂಕ:18–7–2006ರ ಸಭೆಯಲ್ಲಿ ಚರ್ಚೆಗೆ ಮಂಡಿಸಿದ್ದ ವಿಷಯ ಸಂಖ್ಯೆ:6ನ್ನು ಮುಂದೂಡಲಾಗಿದ್ದು, ಪೌನಿಹ/ಎಸ್.ಎಫ್.ಸಿ./06/2006–07 ದಿನಾಂಕ:27–5–2006ರಂತೆ ರೂ.1.00ಕೋಟಿ ಎಸ್.ಎಫ್.ಸಿ.ನಿಧಿಯಡಿಯಲ್ಲಿ ಬಂದಿರುವ ಅನುದಾನಕ್ಕೆ ಕ್ರಿಯಾ ಯೋಜನೆಯನ್ನು ತಯಾರಿಸುವ ಬಗ್ಗೆ ಚರ್ಚಿಸಿ ತೀರ್ಮಾನ ಕೈಗೊಳ್ಳುವ ವಿಚಾರ.

__ತೀರ್ಮಾನ:2:__– ವಿಷಯದ ಬಗ್ಗೆ ಸಭೆಯಲ್ಲಿ ಸುದೀರ್ಘವಾಗಿ ಚರ್ಚಿಸಿ ಎಲ್ಲಾ ಮಾನ್ಯ ಸದಸ್ಯರುಗಳು ಅವರುಗಳ ಅಭಿಪ್ರಾಯಗಳನ್ನು ಸಭೆಗೆ ವಿವರಿಸಿದರು. ನಂತರ ಮಾನ್ಯ ಶಾಸಕರು ಮತ್ತು ವಿಧಾನ ಪರಿಷತ್ ಸದಸ್ಯರುಗಳು ಎಲ್ಲರ ಅಭಿಪ್ರಾಯಗಳ ಬಗ್ಗೆ ಕೂಲಂಕುಷವಾಗಿ ಚರ್ಚಿಸಿ ಎಸ್.ಎಫ್.ಸಿ.ನಿಧಿಯಿಂದ ಬಿಡುಗಡೆಯಾಗಿರುವ 1.00ಕೋಟಿ (ಒಂದು ಕೋಟಿ) ರೂಪಾಯಿಗಳನ್ನು ಪ್ರತಿ ವಾರ್ಡ್‌ಗೆ 2.50ಲಕ್ಷ ರೂಪಾಯಿಗಳಲ್ಲಿ ಆಯಾ ವಾರ್ಡ್‌ನ ಸದಸ್ಯರು ಸೂಚಿಸುವ ಅತ್ಯಾವಶ್ಯಕ ಕಾಮಗಾರಿಗಳಿಗೆ ವಿನಿಯೋಗಿಸುವುದು. ಉಳಿದ ಮೊತ್ತದಲ್ಲಿ ಮಾನ್ಯ ಶಾಸಕರು ಅವಶ್ಯಕತೆ ಇರುವ ರಸ್ತೆಗಳನ್ನು ಅಭಿವೃದ್ಧಿಪಡಿಸುವುದೆಂದು ಸೂಚಿಸಿದರು. ಇವರ ಸೂಚನೆಯನ್ನು ಸಭೆಯು ಸರ್ವಾನುಮತದಿಂದ ಒಪ್ಪಿ ತೀರ್ಮಾನಿಸಲಾಯಿತು. ಹಾಗೂ ಮಾನ್ಯ ಜಿಲ್ಲಾಧಿಕಾರಿಗಳ ಅನುಮೋದನೆ ಪಡೆದು ಟೆಂಡರ್ ಕರೆದು ಕಡಿಮೆ ದರದ ಟೆಂಡರನ್ನು ಅಂಗೀಕರಿಸಿ ಕಾಮಗಾರಿ ನಿರ್ವಹಿಸಲು ಅಧ್ಯಕ್ಷರಿಗೆ ಅಧಿಕಾರ ನೀಡುವುದೆಂದು ತೀರ್ಮಾನಿಸಲಾಯಿತು.

__ವಿಷಯ:3:__– ದಿನಾಂಕ:18–7–2006ರ ಸಭೆಗೆ ಮಂಡಿಸಿದ್ದ ವಿಷಯ ಸಂಖ್ಯೆ: 21(1)ನ್ನು ಮುಂದೂಡಲಾಗಿದ್ದು ರಿಟ್ ಪಿಟಿಷನ್ ಸಂಖ್ಯೆ:16247/2000 ಮೊಖದ್ದಮೆ ದಾಖಲಾಗಿದ್ದು ಸರ್ಕಾರಿ ವಕೀಲರ ಅಭಿಪ್ರಾಯದಂತೆ 227' X 340' ಅಡಿ ನಿವೇಶನವನ್ನು ಡಾ.ಬಿ.ಆರ್.ಅಂಬೇಡ್ಕರ್ ಭವನ ನಿರ್ಮಾಣ ಮಾಡುವ ಬಗ್ಗೆ ವಕೀಲರ ಅಭಿಪ್ರಾಯದಂತೆ ಕೌನ್ಸಿಲ್ ಒಪ್ಪಿಗೆ ನೀಡಲು ಚರ್ಚಿಸಿ ತೀರ್ಮಾನ ಕೈಗೊಳ್ಳುವ ವಿಚಾರ.

__ತೀರ್ಮಾನ:3:__– ಸಭೆಯಲ್ಲಿ ಚರ್ಚಿಸಲಾಗಿ ಈ ಹಿಂದೆ 150'X220'ಅಡಿಗಳನ್ನು ನೀಡಲಾಗಿತ್ತು. ಒಟ್ಟು ನಿವೇಶನದ ಅಳತೆ 227'X340'ಅಡಿಗಳ ವಿಸ್ತೀರ್ಣದ ನಿವೇಶನವನ್ನು ಡಾ:ಬಿ.ಆರ್.ಅಂಬೇಡ್ಕರ್ ಭವನ ನಿರ್ಮಾಣ ಮಾಡಲು ನೀಡುವುದೆಂದು ಒಪ್ಪಿ ಸರ್ವಾನುಮತದಿಂದ ತೀರ್ಮಾನಿಸಲಾಯಿತು.

__ವಿಷಯ:4:__– ನಗರಸಭೆ ವ್ಯಾಪ್ತಿಯಲ್ಲಿರುವ ಖಾಲಿ ನಿವೇಶನಗಳನ್ನು ಬಹಿರಂಗ ಹರಾಜು ಮಾಡುವ ಬಗ್ಗೆ ಚರ್ಚಿಸಿ ತೀರ್ಮಾನ ಕೈಗೊಳ್ಳುವ ವಿಚಾರ.

__ತೀರ್ಮಾನ:4:__– ನಗರಸಭಾ ವ್ಯಾಪ್ತಿಯಲ್ಲಿ ಬರುವ ನಗರಸಭೆ ಖಾಲಿ ನಿವೇಶನಗಳನ್ನು ಬಹಿರಂಗ ಹರಾಜು ಮೂಲಕ ವಿಲೇಪಡಿಸುವುದೆಂದು ಸರ್ವಾನುಮತದಿಂದ ತೀರ್ಮಾನಿಸಲಾಯಿತು ಹಾಗೂ 2327 ನಿವೇಶನಗಳು ಸರ್ಕಾರಿ ಮಂಜೂರಾತಿಯಾಗಿದ್ದು ಹಾಲಿ ಮಂಜೂರುದಾರರಿಂದ ಕಿಮ್ಮತ್ತು ಕಟ್ಟಿಸಿಕೊಳ್ಳಲು ಹಾಗೂ ಅನಧಿಕೃತವಾಗಿ ಮನೆ ನಿರ್ಮಿಸಿಕೊಂಡಿರುವವರ ಬಗ್ಗೆ ನಿಯಮಾನುಸಾರ ಪರಿಶೀಲಿಸಿ ಸ್ಥಾಯಿ ಸಮಿತಿ ಸಭೆಗೆ ವಿಷಯವನ್ನು ಮಂಡಿಸಿ ತೀರ್ಮಾನ ಕೈಗೊಳ್ಳುವುದೆಂದು ತೀರ್ಮಾನಿಸಲಾಯಿತು.

**ವಿಷಯ:5:–** ದಿನಾಂಕ:10–8–2006ರಂದು ಬಹಿರಂಗ ಹರಾಜು ಮೂಲಕ ಅನುಪಯುಕ್ತ ಸಾಮಗ್ರಿಗಳನ್ನು ವಿಲೇಪಡಿಸಲಾಗಿದ್ದು ಆಖೈರು ಬಿಡ್ಡುದಾರರ ಬಿಡ್ಡ್‌ಅನ್ನು ಅಂಗೀಕರಿಸುವ ವಿಚಾರ.

**ತೀರ್ಮಾನ:5:–** ಅಂಗೀಕರಿಸಬಹುದೆಂದು ಸರ್ವಾನುಮತದಿಂದ ತೀರ್ಮಾನಿಸಲಾಯಿತು.

**ವಿಷಯ:6:–** ಮಂಡ್ಯ ನಗರಸಭಾ ವ್ಯಾಪ್ತಿಯೊಳಗೆ ಕನ್ಸರ್ವೆನ್ಸಿ ಗಲ್ಲಿಗಳಲ್ಲಿರುವ ಜಾಗವನ್ನು ವಿಲೇಪಡಿಸುವ ಬಗ್ಗೆ ಚರ್ಚಿಸಿ ತೀರ್ಮಾನ ಕೈಗೊಳ್ಳುವ ವಿಚಾರ.

**ತೀರ್ಮಾನ:6:–** ಸಭೆಯಲ್ಲಿ ಚರ್ಚಿಸಲಾಗಿ ಖಾತೆದಾರರುಗಳ ಸ್ವತ್ತಿಗೆ ಹೊಂದಿಕೊಂಡಂತೆ ಲಗತ್ತು ಜಾಗವನ್ನು ಸದರಿಯವರುಗಳಿಗೆ ಪ್ರಥಮ ಆದ್ಯತೆ ನೀಡಿ ನಿಯಮಾನುಸಾರ ವಿಲೇವಾರಿ ಮಾಡಲು ತೀರ್ಮಾನಿಸಲಾಯಿತು.

**ವಿಷಯ:7:–** ಮಂಡ್ಯ ನಗರಸಭೆಗೆ ಸಾರ್ವಜನಿಕ ಉಪಯೋಗಕ್ಕಾಗಿ ಶವ ಸಾಗಿಸುವ ವಾಹನ ಖರೀದಿಸಲು ತೀರ್ಮಾನ ಕೈಗೊಳ್ಳುವ ವಿಚಾರ.

**ತೀರ್ಮಾನ:7:–** ಕಾನೂನು ರೀತ್ಯಾ ಖರೀದಿಸಬಹುದೆಂದು ಸರ್ವಾನುಮತದಿಂದ ತೀರ್ಮಾನಿಸಲಾಯಿತು.

**ವಿಷಯ:8:–** ದಿನಾಂಕ:15–2–2006ರ ಸಾಮಾನ್ಯ ಸಭೆ ವಿಷಯ ಸಂಖ್ಯೆ:9ರ ತೀರ್ಮಾನದಂತೆ 12ನೇ ಹಣಕಾಸು ಯೋಜನೆಯಡಿ ಬಂದಿರುವ 10.84ಲಕ್ಷ ರೂ.ಗಳನ್ನು ವಾರ್ಡ್‌ಗಳ ನಡುವೆ ಸಂಪರ್ಕ ಕಲ್ಪಿಸುವ ರಸ್ತೆಗಳ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲು ತೀರ್ಮಾನಿಸತಕ್ಕ ವಿಚಾರ.

**ತೀರ್ಮಾನ:8:–** ಸಭೆಯಲ್ಲಿ ಚರ್ಚಿಸಲಾಗಿ ವೈಟ್ ಮೆಟಲ್ ಅಲಾಯ್ಡ್ ದೀಪಗಳನ್ನು ಖರೀದಿಸಬಹುದೆಂದು ಸರ್ವಾನುಮತದಿಂದ ತೀರ್ಮಾನಿಸಲಾಯಿತು.

**ವಿಷಯ:9:–** ಮಾನ್ಯ ಸದಸ್ಯರುಗಳಾದ ಶ್ರೀಮತಿ.ಎಂ.ಗೀತಾ ರಾಮಕೃಷ್ಣ, ಶ್ರೀ.ಬಿ.ಎಂ.ಬಾಷ, ಶ್ರೀ.ನಂಜಯ್ಯ , ಶ್ರೀ.ಟಿ.ಶಂಕರ್, ಶ್ರೀಮತಿ.ಈರಮ್ಮ ಮತ್ತು ಶ್ರೀ.ಮುನಾವರ್ ಖಾನ್ ಇವರುಗಳ ವಾರ್ಡ್‌ನಲ್ಲಿ 2.00 ಲಕ್ಷ ರೂ.ಗಳ ವೆಚ್ಚದಲ್ಲಿ ಪೈಪ್ ಲೈನ್ ಅಳವಡಿಸುವ ಕಾಮಗಾರಿ ಮಾಡಿಸುವುದರ ಬಗ್ಗೆ ತೀರ್ಮಾನ ಕೈಗೊಳ್ಳುವ ವಿಚಾರ.

**ತೀರ್ಮಾನ:9:–** ಈಗಾಗಲೇ ಸರ್ಕಾರದಿಂದ ಮಂಡ್ಯ ನಗರಸಭೆ ವ್ಯಾಪ್ತಿಗೆ ಒಳಪಟ್ಟಂತೆ ರೀಮಾಡ್ಲಿಂಗ್ ಪೈಪ್ ಲೈನ್ ಅಳವಡಿಸಲು 6.75 ಕೋಟಿ ರೂಪಾಯಿಗಳು ಮಂಜೂರಾಗಿರುವುದರಿಂದ ಸದರಿ ವಿಷಯವನ್ನು ಕೈಬಿಡಲಾಯಿತು.

**ವಿಷಯ:10:–** ಅಧ್ಯಕ್ಷರ ಅಪ್ಪಣೆ ಮೇರೆಗೆ ಚರ್ಚೆಗೆ ತರಬಹುದಾದ ಇತರೆ ಜರೂರಾತಿ ವಿಷಯಗಳು.

**ವಿಷಯ:10(1):–** ಮಾನ್ಯ ಸದಸ್ಯರಾದ ಶ್ರೀ.ಎಂ.ಸಿ.ರಾಘವೇಂದ್ರರವರಿಂದ ಬಂದಿರುವ ವಿಷಯ. 2006–07ನೇ ಸಾಲಿನ ಬಜೆಟ್‌ನಲ್ಲಿ ಪ್ರತಿ ವಾರ್ಡ್‌ನಲ್ಲಿ 10 ಜನ ಅರ್ಹ ಬಡ ಮಹಿಳೆಯರನ್ನು ಗುರ್ತಿಸಿ ಹೊಲಿಗೆ ತರಬೇತಿ ನೀಡಿ ಅವರುಗಳಿಗೆ ಹೊಲಿಗೆ ಯಂತ್ರ ವಿತರಿಸುವಂತೆ ಕೋರಿರುವ ವಿಚಾರ.

**ತೀರ್ಮಾನ:10(1):–** ನಗರಸಭೆ ಆರ್ಥಿಕ ಪರಿಸ್ಥಿತಿಗೆ ಅನುಗುಣವಾಗಿ ಹೊಲಿಗೆ ತರಬೇತಿ ನೀಡಿ ಹೊಲಿಗೆ ಯಂತ್ರಗಳನ್ನು ಖರೀದಿಸಿ ವಿತರಿಸುವುದೆಂದು ತೀರ್ಮಾನಿಸಲಾಯಿತು.

**ವಿಷಯ:10(2):–** ಮಾನ್ಯ ಸದಸ್ಯರಾದ ಶ್ರೀ.ನಂಜಯ್ಯರವರಿಂದ ಬಂದಿರುವ ವಿಷಯ – ಹಾಲಹಳ್ಳಿ ಮತ್ತು ಹೊಸಹಳ್ಳಿ ಜನರಲ್ ಆಸ್ಪತ್ರೆ ರಸ್ತೆ ನಡುವೆ ಮಿರ್ಜಾ ಇಸ್ಮಾಯಿಲ್ ರಸ್ತೆಯಲ್ಲಿರುವ ವೃತ್ತಕ್ಕೆ "ಶ್ರೀ ಆಂಜನೇಯ ರಸ್ತೆ "ಎಂದು ನಾಮಕರಣ ಮಾಡುವ ಬಗ್ಗೆ ಚರ್ಚಿಸಿ ತೀಮಾನ ಕೈಗೊಳ್ಳುವ ವಿಚಾರ.

**ತೀರ್ಮಾನ:10(2):–** ಸರ್ವಾನುಮತದಿಂದ ಒಪ್ಪಲಾಯಿತು.

**ವಿಷಯ:10(3):–** ಮಂಡ್ಯ ನಗರದ ಗಾಂಧಿ ಪಾರ್ಕ್ ನಿರ್ವಹಣೆ ಅವಧಿಯು ದಿನಾಂಕ:31–6–2006ಕ್ಕೆ ಮುಕ್ತಾಯಗೊಂಡಿದ್ದು ಮುಂದಿನ ನಿರ್ವಹಣೆ ಬಗ್ಗೆ ಚರ್ಚಿಸಿ ತೀರ್ಮಾನ ಕೈಗೊಳ್ಳುವ ವಿಚಾರ.

**ತೀರ್ಮಾನ:10(3):–**ಸೇವಾ ಸಂಸ್ಥೆಗಳು ಅಥವಾ ಸಾರ್ವಜನಿಕರು ಯಾರಾದರು ಮುಂದೆ ಬಂದಲ್ಲಿ ಅವರೇ ನಿರ್ವಹಣೆ ಮಾಡುವುದೆಂದು ಒಂದು ವರ್ಷದ ಅವಧಿಗೆ ನೀಡುವುದೆಂದು ಮತ್ತು ಖಾಸಗಿ ಬಸ್ ನಿಲ್ದಾಣದ ಶೌಚಾಲಯದ ನಿರ್ವಹಣೆ ಅವಧಿ ಮುಗಿದಿದ್ದು ಸದರಿ ಶೌಚಾಲಯವನ್ನು ನಿರ್ವಹಣೆ ಮಾಡಿ ನಗರಸಭೆಗೆ ಮಾಸಿಕ ಬಾಡಿಗೆ ನೀಡಲು ಮುಂದೆ ಬರುವ ಸೇವಾ ಸಂಸ್ಥೆಗಳಿಗೆ ನೀಡುವ ಬಗ್ಗೆ ಮಾನ್ಯ ಅಧ್ಯಕ್ಷರು ಮತ್ತು ಪೌರಾಯುಕ್ತರಿಗೆ ಅಧಿಕಾರ ನೀಡುವುದೆಂದು ಸರ್ವಾನುಮತದಿಂದ ತೀರ್ಮಾನಿಸಲಾಯಿತು.

**ವಿಷಯ: 10(4):–** ದಿನಾಂಕ:16–8–2006ರಂದು ಮಂಡ್ಯ ನಗರದ ಸಿಲ್ವರ್ ಜ್ಯೂಬಿಲಿ ಪಾರ್ಕ್ ಹತ್ತಿರ ಮಹಾವೀರ ವೃತ್ತದ ಬಳಿ ಇರುವ ನಗರಸಭೆ ಐ.ಡಿ.ಎಸ್.ಎಂ.ಟಿ.ವಾಣಿಜ್ಯ ಸಂಕೀರ್ಣದಲ್ಲಿ ಖಾಲಿ ಇರುವ 25 ಸಂಖ್ಯೆ ಮಳಿಗೆಗಳನ್ನು ಬಹಿರಂಗ ಹರಾಜು ಮಾಡಲಾಗಿದ್ದು, ಈ ಹರಾಜನ್ನು ಸ್ಥಿರೀಕರಿಸುವ ವಿಚಾರ.

**ತೀರ್ಮಾನ:10(4):–**ಮಳಿಗೆ ಸಂಖ್ಯೆ:1,2,3,5,6,7,8,9,11,12,13,16,17,18,19,24,25,26,27,30,35,36,23,20ಗಳನ್ನು ಬಹಿರಂಗ ಹರಾಜು ಮೂಲಕ ವಿಲೇ ಮಾಡಲಾಗಿದ್ದು ಹರಾಜನ್ನು ಸ್ಥಿರೀಕರಿಸಬಹುದೆಂದು ಸರ್ವಾನುಮತದಿಂದ ತೀರ್ಮಾನಿಸಲಾಯಿತು.

**ವಿಷಯ:10(5):–**ಅಶೋಕನಗರ 3ನೇ ಅಡ್ಡ ರಸ್ತೆಯನ್ನು ಆಸ್ಪತ್ರೆ ರಸ್ತೆಯಿಂದ ಜೋಡಿ ರಸ್ತೆವರೆಗೆ ಅಭಿವೃದ್ಧಿಪಡಿಸುವ ಬಗ್ಗೆ ಚರ್ಚಿಸಿ ತೀರ್ಮಾನ ಕೈಗೊಳ್ಳುವ ವಿಚಾರ (ದಿನಾಂಕ:20–8–2006ರಂದು ಮಾನ್ಯ ಮುಖ್ಯ ಮಂತ್ರಿಗಳು ಆಗಮಿಸುತ್ತಿರುವುದರಿಂದ).

**ತೀರ್ಮಾನ:10(5):––** ಸಾರ್ವಜನಿ ಹಿತದೃಷ್ಟಿಯಿಂದ ಮಾನ್ಯ ಮುಖ್ಯ ಮಂತ್ರಿಗಳುಮಂಡ್ಯ ನಗರಕ್ಕೆ ಸದರಿ ರಸ್ತೆಯಲ್ಲಿರುವ ಆಸ್ಪತ್ರೆ ಉದ್ಘಾಟನೆಗೆ ಆಗಮಿಸುತ್ತಿರುವುದರಿಂದ ಎರಡು ಕಡೆ ಚರಂಡಿ ನಿರ್ಮಿಸಿ ರಸ್ತೆ ಅಭಿವೃದ್ಧಿಪಡಿಸಲು ತೀರ್ಮಾನಿಸಲಾಯಿತು.

**ವಿಷಯ:10(6):–** ದಿನಾಂಕ:7–6–2006ರ ಸಾಮಾನ್ಯ ಸಭೆಯ ವಿಷಯ ಸಂಖ್ಯೆ:18(19)ರ ತೀರ್ಮಾನವಾಗಿದ್ದು ನಗರಸಭಾ ಸದಸ್ಯರುಗಳು ಅಧ್ಯಯನ ಪ್ರವಾಸ ಕೈಗೊಂಡಿದ್ದು ಸದರಿ ನಡವಳಿಕೆಯನ್ನು ಮಾರ್ಪಾಡು ಮಾಡಿಕೊಂಡು ಮಂಡ್ಯ ನಗರಸಭೆಯಿಂದ ಕಾರವಾರ ನಗರಸಭೆ, ಬೆಳಗಾಂ ನಗರ ಪಾಲಿಕೆ, ಗೋವಾ ನಗರ ಪಾಲಿಕೆ ಮತ್ತು ಮುಂಬೈ ಮಹಾ ನಗರ ಪಾಲಿಕೆಗಳ ಕಾರ್ಯ ವೈಖರಿಯನ್ನು ತಿಳಿದುಕೊಂಡು ಬರಲು ಪ್ರವಾಸ ಕಾರ್ಯಕ್ರಮ ಕೈಗೊಂಡಿದ್ದು ಸ್ಥಳ ಮಾರ್ಗದಲ್ಲಿ ಬರುವ ಪ್ರೇಕ್ಷಣೀಯ ಸ್ಥಳಗಳನ್ನು ಸಹಾ ವೀಕ್ಷಿಸಿ ಬರಲು ಟೆಂಡರ್ ಪ್ರಕಟಣೆ ಹೊರಡಿಸಿ ಪ್ರವಾಸ ಹೋಗುವುದರ ಬಗ್ಗೆ ಚರ್ಚಿಸಿ ತೀರ್ಮಾನ ಕೈಗೊಳ್ಳುವ ವಿಚಾರ.

**ತೀರ್ಮಾನ:10(6):–** ಮಾನ್ಯ ಪೌರಾಡಳಿತ ನಿರ್ದೇಶಕರು, ಬೆಂಗಳೂರುರವರ ಅನುಮೋದನೆಯನ್ನು ಪಡೆದು ನಗರಸಭಾ ನಿಧಿಯಿಂದ 3.00 ಲಕ್ಷ ರೂಪಾಯಿಗಳನ್ನು ಮಂಜೂರ್ಮಾಡಿಕೊಡಲು ಸರ್ವಾನುಮತದಿಂದ ತೀರ್ಮಾನಿಸಲಾಯಿತು.

**ವಿಷಯ:10(7):–** ಮಾನ್ಯ ಸದಸ್ಯರಾದ ಶ್ರೀ.ನಾಗರಾಜುರವರಿಂದ ಬಂದಿರುವ ವಿಷಯ. ವಾರ್ಡ್ ನಂಬರ್ 30ರಲ್ಲಿ ಗುತ್ತಲು ಕಾಲೋನಿ ಅರ್ಕೇಶ್ವರನಗರ ನಿವಾಸಿಗಳಿಂದ ಬಂದಿರುವ ವಿಷಯ. 2001–02ನೇ ಸಾಲಿನ ಕಂದಾಯದ ಬಗ್ಗೆ ಹಾಗೂ ಸ್ವಯಂ ಘೋಷಿತ ಆಸ್ತಿ ತೆರಿಗೆಗಳನ್ನು ಪಾವತಿಸಲು ಸರಿಯಾದ ಅಳತೆಗಳನ್ನು ಅಸೆಸ್‌ಮೆಂಟ್ ವಹಿಗಳಲ್ಲಿ ನಮೂದಿಸುವ ಬಗ್ಗೆ ಸಂಬಂಧಪಟ್ಟ ಅಧಿಕಾರಿಗಳು ಪರಿಶೀಲಿಸಿ ಅಳತೆಗಳನ್ನು ನಮೂದಿಸಿ ಎಸ್.ಎ.ಎಸ್. ಫಾರಂ ಗಳನ್ನು ಬರೆದುಕೊಡುವುದರ ಬಗ್ಗೆ ಸದರಿ ವಾರ್ಡ್‌ನಲ್ಲಿ ಸಿಬ್ಬಂದಿಗಳು ಸ್ಥಳ ಪರಿಶೀಲಿಸಿ ಮಾಹಿತಿಗಳನ್ನು ಖಾತೆದಾರರುಗಳಿಂದ ಪಡೆದು ಸ್ಥಳದಲ್ಲೇ ಕ್ರಮ ವಹಿಸುವುದರ ಬಗ್ಗೆ ಚರ್ಚಿಸಿ ತೀರ್ಮಾನ ಕೈಗೊಳ್ಳುವ ವಿಚಾರ.

**ತೀರ್ಮಾನ:10(7):–** ಕಛೇರಿಯಿಂದ ಸಂಬಂಧಪಟ್ಟ ಕಂದಾಯ ಅಧಿಕಾರಿಗಳನ್ನು ನಿಯೋಜಿಸಿ ಸ್ಥಳ ಪರಿಶೀಲಿಸಿ ಕಾನೂನು ರೀತ್ಯಾ ಕ್ರಮ ಕೈಗೊಳ್ಳುವುದೆಂದು ಸರ್ವಾನುಮತದಿಂದ ಒಪ್ಪಿ ತೀರ್ಮಾನಿಸಲಾಯಿತು.

**ವಿಷಯ:10(8):–** ಶ್ರೀ.ಶಂಕರ ಬಿನ್ ಚನ್ನೇಗೌಡ ತಾತ್ಕಾಲಿಕ ವಾಹನ ಚಾಲಕರವರಿಗೆ ನೀಡಬೇಕಾದ ವಾರ್ಷಿಕ ವೇತನ ಬಡ್ತಿ 1–9–2003 ರಿಂದ 2006ನೇ ಆಗಸ್ಟ್ ಮಾಹೆವರೆಗೆ ವಾರ್ಷಿಕ ಬಡ್ತಿಗಳನ್ನು ಮಂಜೂರುಮಾಡಿ ಸದರಿ ವೇತನದ ವ್ಯತ್ಯಾಸದ ಮೊತ್ತವನ್ನು ಪಾವತಿಸುವ ವಿಚಾರ.

**ತೀರ್ಮಾನ:10(8):–** ಕಾನೂನು ರೀತ್ಯಾ ಪಾವತಿಸಬಹುದೆಂದು ತೀರ್ಮಾನಿಸಲಾಯಿತು.

**ವಿಷಯ:10(9):–** ಶ್ರೀ.ಎಲ್.ನಾಗರಾಜು , ಆಂಟಿ ಮಲೇರಿಯಾ ಗ್ಯಾಂಗ್ ಮ್ಯಾನ್ ಇವರಿಗೆ 1–4–2005 ರಿಂದ ವಾರ್ಷಿಕ ವೇತನ ಬಡ್ತಿ ಮಂಜೂರ್ಮಾಡಿ ವ್ಯತ್ಯಾಸದ ಮೊತ್ತವನ್ನು ಪಾವತಿಸುವ ವಿಚಾರ.

**ತೀರ್ಮಾನ:10(9):–** ಕಾನೂನು ರೀತ್ಯಾ ಪಾವತಿಸಬಹುದೆಂದು ತೀರ್ಮಾನಿಸಲಾಯಿತು.

**ವಿಷಯ:10(10):–** ಮಾನ್ಯ ಜಿಲ್ಲಾಧಿಕಾರಿಗಳು, ಮಂಡ್ಯ ಜಿಲ್ಲೆ, ಮಂಡ್ಯರವರ ಅಧಿಕೃತಜ್ಞಾಪನ ಪತ್ರ ಸಂಖ್ಯೆ:

1) ಮುನಿಸಿ(2) 122/2006–07 ದಿನಾಂಕ:22–7–2006 – ಶ್ರೀ.ಬಸವಯ್ಯ ಬಿನ್ ದೊಡ್ಡಭದ್ರಯ್ಯ , ಡಿ–ಗ್ರೂಪ್ ನೌಕರರು
2) ಮುನಿಸಿ(2) 433/2005–06 ದಿನಾಂಕ:17–7–2006 –ಶ್ರೀ.ಕೆ.ಕುಳ್ಳೇಗೌಡ , ಡಿ ಗ್ರೂಪ್ ನೌಕರರು
3) ಮುನಿಸಿ(2) 418/2005–06 ದಿನಾಂಕ:4–7–2006 – ಶ್ರೀ.ಬೋರಯ್ಯ ಬಿನ್ ಅಣ್ಣೇಗೌಡ, –"–
4) ಮುನಿಸಿ(2) 84/2006–07ದಿನಾಂಕ:11–7–2006 – ಲೇಟ್.ವೈ.ಎನ್.ಪುಟ್ಟಸ್ವಾಮಿ –"–
5) ಮುನಿಸಿ(2) 92/2006–07 ದಿನಾಂಕ:19–7–2006 – ಶ್ರೀ.ಮಾದಯ್ಯ ಬಿನ್ ದೊಡ್ಡಯ್ಯ –"–
6) ಮುನಿಸಿ(2) 431/2005–06 ದಿನಾಂಕ:17–7–2006 – ಶ್ರೀಮತಿ.ಸುಲೋಚನಮ್ಮ –"–
7) ಮುನಿಸಿ(2) 432/2005–06 ದಿನಾಂಕ:11–7–2006 – ಶ್ರೀಮತಿ.ಇಂದ್ರಮ್ಮ –"–
8) ಮುನಿಸಿ(2) 91/2006–07 ದಿನಾಂಕ:19–7–2006 – ಶ್ರೀಮತಿ.ಜಯಮ್ಮ ಕೋಂ.ಜವರೇಗೌಡ –"–
9) ಮುನಿಸಿ(2) 114/2006–07 ದಿನಾಂಕ:27–7–2006 – ಶ್ರೀ.ಗುರುನಂಜ –"–
10) ಮುನಿಸಿ(2) 21/2006–07 ದಿನಾಂಕ:27–7–2006 – ಶ್ರೀ.ಗುರುಮಲ್ಲ –"–
11) ಮುನಿಸಿ(2) 115/2006–07 ದಿನಾಂಕ:27–7–2006 – ಶ್ರೀ.ರಾಮು ಬಿನ್ ಮೂಡಲಗಿರಿ –"–
12) ಮುನಿಸಿ(2) 123/2006–07 ದಿನಾಂಕ:27–7–2006 – ಶ್ರೀ.ಪ್ಯಾರಿಜಾನ್ –"–
13) ಮುನಿಸಿ(2) 417/2005–06 ದಿನಾಂಕ:11–7–2006 – ಶ್ರೀ.ಬಸವಯ್ಯ ಬಿನ್ ಬಸವಯ್ಯ –"–
14) ಮುನಿಸಿ(2) 117/2006–07 ದಿನಾಂಕ;27–7–2006 – ಶ್ರೀ.ವೆಂಕಟೇಶ ಬಿನ್ ತಿಮ್ಮಯ್ಯ –"–
15) ಮುನಿಸಿ(2) 430/2005–06 ದಿನಾಂಕ:11–7–2006 – ಶ್ರೀ.ವೆಂಕಟೇಶ ಬಿನ್ ತಿಮ್ಮಯ್ಯ –"–
16) ಮುನಿಸಿ(2) 435/2005–06 ದಿನಾಂಕ:11–7–2006 – ಶ್ರೀ.ಶಾಂತಪ್ಪ –"–
17) ಮುನಿಸಿ(2) 113/2006–2007 ದಿನಾಂಕ:27–7–2006 – ಶ್ರೀ.ಬೋರಯ್ಯ ಬಿನ್ ಮಂಚಯ್ಯ –"–
18) ಮುನಿಸಿ(2) 124/2006–07 ದಿನಾಂಕ:27–7–2006 – ಶ್ರೀ. ಸಿದ್ಧಾಂಕ –"–
19) ಮುನಿಸಿ(2) 118/2005–06 ದಿನಾಂಕ:27–7–2006 – ಶ್ರೀ. ಪುಟ್ಟಯ್ಯ –"–

20) ಮುನಿಸಿ(2) 116/2006–07 ದಿನಾಂಕ:27–7–2006 – ಶ್ರೀ.ಕೆ.ಪುಟ್ಟಸ್ವಾಮಿ –"–
21) ಮುನಿಸಿ(2) 98/2006–07 ದಿನಾಂಕ:19–7–2006 – ಶ್ರೀ.ಬೋರಮ್ಮ –"–
22) ಮುನಿಸಿ(2) 424/2005–06 ದಿನಾಂಕ:17–7–2006 – ಶ್ರೀ.ನಿಂಗಯ್ಯ ಬಿನ್ ಬೋರೇಗೌಡ –"–
23) ಮುನಿಸಿ(2)90/2006–07 ದಿನಾಂಕ:19–7–2006 – ಶ್ರೀಮತಿ.ಮಣಿಯಮ್ಮ –"–
24) ಮುನಿಸಿ(2) 434/2005–06 ದಿನಾಂಕ:17–7–2006 – ಶ್ರೀ.ಸುಬ್ರಮಣಿ ಪೌರಕಾರ್ಮಿಕ
25) ಮುನಿಸಿ(2) 436/2005–06 ದಿನಾಂಕ:24–4–2006 – ಲೇಟ್.ಎ.ರಾಮಯ್ಯ –"–

26) ಮುನಿಸಿ(2) 445/2005–06 ದಿನಾಂಕ:17–7–2006 – ಶ್ರೀಮತಿ.ಸುಬ್ಬಮ್ಮ –"–
27) ಮುನಿಸಿ(2) 404/2005–06 ದಿನಾಂಕ:11–7–2006 – ಶ್ರೀ.ಮಲ್ಲಯ್ಯ ಬಿನ್ ಪೊನ್ನಯ್ಯ –"–
28) ಮುನಿಸಿ(2) 411/2005–06 ದಿನಾಂಕ:11–7–2006 – ಶ್ರೀಮತಿ.ನಂಜಮ್ಮ ಕೋಂ.ರಾಜು –"–
29) ಮುನಿಸಿ(2) 405/2005–06 ದಿನಾಂಕ:28–7–2006 – ಶ್ರೀಮತಿ.ನಂಜಮ್ಮ ಕೋಂ. ಸುಬ್ಬಯ್ಯ –"–

ಈ ಮೇಲ್ಕಂಡ ನೌಕರರಿಗೆ ಒಂದೇ ಹುದ್ದೆಯಲ್ಲಿ 10,15,20 ವರ್ಷಗಳ ಸೇವೆ ಪೂರ್ಣಗೊಳಿಸಿರುವುದರಿಂದ ಕಾಲಮಿತಿ ಪದೋನ್ನತಿ ಬಡ್ತಿ, ಸ್ವಯಂಚಾಲಿತ ವೇತನ ಮುಂಬಡ್ತಿ ಮತ್ತು ವಿಶೇಷ ಹೆಚ್ಚುವರಿ ವೇತನ ಬಡ್ತಿಯನ್ನು ಮಂಜೂರು ಮಾಡಿದ್ದು ವೇತನ ವ್ಯತ್ಯಾಸದ ಮೊಬಲಗನ್ನು ಪಾವತಿಸಿರುವುದರಿಂದ ಅನುಮೋದನೆ ನೀಡುವ ವಿಚಾರ.

**<u>ತೀರ್ಮಾನ:10(10):– </u>** ಕಾನೂನು ರೀತ್ಯಾ ಪಾವತಿಸಬಹುದೆಂದು ತೀರ್ಮಾನಿಸಲಾಯಿತು.

**<u>ವಿಷಯ :10(11):–</u>** ಐ.ಡಿ.ಎಸ್.ಎಂ.ಟಿ. ಯೋಜನೆಯ ಮಹಾವೀರ ಸರ್ಕಲ್‌ನಲ್ಲಿರುವ ಮಳಿಗೆಗಳ ಮುಂಭಾಗ ಕಾಂಪೌಂಡ್ , ಸೈಕಲ್ ಸ್ಟ್ಯಾಂಡ್ ಹಾಗೂ ಚರಂಡಿ ಮೇಲ್ಭಾಗ ಆರ್.ಸಿ.ಸಿ. ಸ್ಲಾಬ್ ಅಳವಡಿಸಲು ಸದಸ್ಯರುಗಳಾದ ಶ್ರೀ.ರವಿಶಂಕರೇಗೌಡ ಮತ್ತು ಶ್ರೀ.ಮಹದೇವು(ಕಿಟ್ಟಿ)ರವರುಗಳು ಕೋರಿರುವ ಬಗ್ಗೆ ಚರ್ಚಿಸಿ ತೀರ್ಮಾನ ಕೈಗೊಳ್ಳುವ ವಿಚಾರ.

**<u>ತೀರ್ಮಾನ:10(11):– </u>** ದಿನಾಂಕ:16–8–2006ರಂದು ಮಹಾವೀರ ಸರ್ಕಲ್‌ನಲ್ಲಿರುವ ಮಳಿಗೆಗಳನ್ನು ಬಹಿರಂಗ ಹರಾಜು ಮೂಲಕ ವಿಲೇವಾರಿ ಮಾಡಲಾಗಿದ್ದು ಬಂದಿರುವ ಠೇವಣಿ ಹಣದಲ್ಲಿ ಮಾನ್ಯ ಜಿಲ್ಲಾಧಿಕಾರಿಗಳ ಅನುಮೋದನೆ ಪಡೆದು ಕಾಮಗಾರಿಗಳನ್ನು ನಿರ್ವಹಿಸುವುದೆಂದು ತೀರ್ಮಾನಿಸಲಾಯಿತು.

**<u>ವಿಷಯ:10(12)</u>:–** ಪ್ರಾಣಿ ಸಂರಕ್ಷಣಾ ವೇದಿಕೆ, ಮಂಡ್ಯರವರ ಸಹಯೋಗದೊಂದಿಗೆ ನಾಯಿಗಳ ಕಡಿತದ ಸಂಖ್ಯೆ ಇಳಿಮುಖವಾಗುತ್ತಿರುವುದರಿಂದ, ಈ ಕಾರ್ಯಕ್ರಮವನ್ನು ಸಮರ್ಪಕವಾಗಿ ರೂಪಿಸಲು ಸಹೃದಯ ಪ್ರಾಣಿ ಪ್ರಿಯ ಸಾರ್ವಜನಿಕರ ಸಹಕಾರದಿಂದ ಕಾರ್ಯಕ್ರಮವನ್ನು ನಗರಸಭೆ, ಮಂಡ್ಯ ಮತ್ತು ಪ್ರಾಣಿ ಸಂರಕ್ಷಣಾ ವೇದಿಕೆಯನ್ನು ನಿರ್ಮಿಸಿ ಶ್ರೀಸಾಮಾನ್ಯರಿಗೆ ಅರಿವು ಮೂಡಿಸುವ ಬಗ್ಗೆ ಚರ್ಚಿಸಿ ತೀರ್ಮಾನ ಕೈಗೊಳ್ಳುವ ವಿಚಾರ.

**<u>ತೀರ್ಮಾನ:10(12):–</u>** ವಿಷಯದ ಬಗ್ಗೆ ಶ್ರೀ.ಬಿ.ರಾಜಣ್ಣರವರು ಮಾತನಾಡುತ್ತಾ ಲಯನ್ಸ್ ಸಂಸ್ಥೆಯವರು ಸಹ ಈ ಕಾರ್ಯಕ್ರಮದಲ್ಲಿ ಸಹಕರಿಸುವುದಾಗಿ ತಿಳಿಸಿದರು. ನಂತರ ನಿಯಮಾನುಸಾರ ಕ್ರಮ ಕೈಗೊಳ್ಳುವುದೆಂದು ಸಭೆಯು ಸರ್ವಾನುಮತದಿಂದ ಒಪ್ಪಿ ತೀರ್ಮಾನಿಸಲಾಯಿತು.

ಸಹಿ:
(ಸಿ.ವಿಜಯಲಕ್ಷ್ಮಿ)
**ಅಧ್ಯಕ್ಷರು,**
**ನಗರಸಭೆ, ಮಂಡ್ಯ.**

"**ನಕಲು**"
ಸಹಿ:
**ಪೌರಾಯುಕ್ತರು,**
**ನಗರಸಭೆ, ಮಂಡ್ಯ.**